Sri AZEEZ SAIT.—I don't think it is absolutely correct. Government has made it clear that no work no wages and workers have been helped in their legitimate cause. This Government has never been in the habit of encouraging them to strike and get benefits.

ಶ್ರೀ ಎಸ್. ಕರಿಯಪ್ಪ.—ಕೆಲಸಗಾರರಲ್ಲಿ ಈ ಕಾರ್ಖಾನೆ ನಮಗೆ ಸೇರಿದ್ದು, ನಾವು ಇದಕ್ಕೆ ಭಾಗಸ್ಥರೆಂಬ ಭಾವನೆ ಬರಬೇಕಾದರೆ ಕಾರ್ಖಾನೆಗೆ ಬರತಕ್ಕ ಉತ್ಪತ್ತಿಯಲ್ಲಿ ಇಷ್ಟು ಭಾಗವನ್ನು ಅವರಿಗೆ ಕೊಡುತ್ತೇವೆಂದು ಗೊತ್ತು ಮಾಡಿದರೆ, ಅದರಿಂದಾದರೂ ಸ್ಟ್ರೈಕುಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಅಜೀಜ್‌ಸೇಟ್.—ಒಟ್ಟಿನಲ್ಲಿ ನಾವು ಏನು ಇದರ ಬಗ್ಗೆ ಕಾನೂನುಗಳನ್ನು ಮಾಡಿದ್ದೇವೋ ಅವನ್ನು ಪ್ರತಿಯೊಬ್ಬರೂ ಒಪ್ಪಿಕೊಂಡರೆ ಇಂತಹ ಕಷ್ಟಕ್ಕೆ ಅವರು ಗುರಿಯಾಗುವುದಿಲ್ಲ.

Development of Chitradurga District as a Place of Tourist Interest

321. Sri C. R. MOHAMED SAIFUDDIN (Chitradurga).—

Will the Minister for Labour be pleased to state:—

(*a*) whether Chitradurga district has been included for development as a place of Tourist interest; the names of places of tourist interest in the district ;

(*b*) the number of tourist Homes that have been constructed in the district ;

(*c*) whether these tourist homes are utilised properly ; if not the reason for the same ;

(*d*) the amount spent on development of Tourism in the District ?

Sri AZEEZ SAIT (Minister for Labour).—

(*a*) (i) Yes.

(ii) Chitradurga (Fort and Jamia Mosque), Vanivilasa Sagar, Jogimatti, Harihareswara temple.

(*b*) A Forest bungalow at Jogimatti and a Tourist Home at Vanivilasa Sagar Dam.

(*c*) The Forest lodge is being utilised; the tourist home at Vanivilasa Sagar is yet to be commissioned.

(*d*) Rs. 1.70 lakhs.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಟೂರಿಸ್ಟ್ ಸೆಂಟರುಗಳಲ್ಲಿ ಚಿತ್ರದುರ್ಗ ಜಿಲ್ಲೆಯನ್ನು ಸೇರಿಸಿ ಎಷ್ಟು ವರ್ಷಗಳಾಯಿತು ? ಆಮೇಲೆ ಅಲ್ಲಿ ಏನೇನು ಯೋಜನೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಎರ್ಪಾಡು ಮಾಡಿದ್ದೀರಿ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

† ಶ್ರೀ ಅಜೀಜ್ ಸೇಟ್.—ಅದಕ್ಕೆ ನೋಟೀಸ್ ಬೇಕು. ಆದರೆ ವಾಣಿವಿಲಾಸ ಸಾಗರ ಅಣೆಕಟ್ಟಿನ ಪ್ರವಾಸಿ ಗೃಹವನ್ನು ಪ್ರಾರಂಭವಾಡುವ ಒಂದು ಯೋಜನೆ ಅಲ್ಲಿ ಇದೆ.